ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ .—ಇದನ್ನು ಒಂದು ನಿರ್ದಿಷ್ಟ ಕಾಲದಲ್ಲಿ ಮಾಡಬೇಕು. ಆ ರೀತಿ ಮಾಡಿ ಅವರನ್ನು ಅಲ್ಲಿಂದ ಕಾಲಿ ಮಾಡಿಸಿದರೆ ಬೇರೆಯವರು ಈ ತರಹ ಕೆಲಸವನ್ನು ಮಾಡುವುದಿಲ್ಲ. ಈಗ ಏನಾಗಿದೆ ಎಂದರೆ ಸರ್ಕಾರಿ ಜಮೀನು ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲಾ ಅಕ್ರಮವಾಗಿ ಪ್ರವೇಶ ಮಾಡುತ್ತಿದ್ದಾರೆ. ಅದನ್ನು ಕೂಡಲೇ ಸಂಬಂಧಪಟ್ಟ ತಹಸೀಲ್ದಾರರಿಗೆ ಸೂಚನೆ ಕೊಟ್ಟು ಅವರನ್ನು ಅಲ್ಲಿಂದ ಕಾಲಿ ಮಾಡಿಸಿ ಸರ್ಕಾರದ ವಶಕ್ಕೆ ತೆಗೆದುಕ್ಕೊಳ್ಳುವುದರಲ್ಲಿ ಸರ್ಕಾರಕ್ಕೆ ಇರತಕ್ಕಂಥ ತೊಂದರೆಯೇನು ?

ಶ್ರೀ ಬಿ. ಬಸವಲಿಂಗಪ್ಪ .—ತೊಂದರೆ ಏನೂ ಇಲ್ಲ. ಆದರೆ ಈ ಬಗ್ಗೆ ಸಿವಿಲ್ ಕೋರ್ಟಿನಿಂದ ಇದರ ಬಗ್ಗೆ ಸ್ಟೇ ಆರ್ಡರ್ ಇದೆ ಎಂಬುದಾಗಿ ನನ್ನ ಗಮನಕ್ಕೆ ಬಂದಿದೆ. ಅದನ್ನು ವಿಚಾರ ಮಾಡುತ್ತೇನೆ. ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಇದರ ಬಗ್ಗೆ ತೀವ್ರ ಗಮನ ಹರಿಸಿ ಅವರನ್ನು ಅಲ್ಲಿಂದ ಕಾಲಿ ಮಾಡಿ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ.

Bye-Pass Road At Tiptur Town

760 SRI V. L. SIVAPPA ((Tiptur).—Will the Minister for Public Works be pleased to state.—

(a) Whether the Government has any proposal to lay a bye-pass road at Tiptur Town ;

(b) if so, action taken so far in this regard ?

SRI S. BANGARAPPA.—(Minister For Public Works)

(a) Yes.

(b) Construction of a bye-pass of 1.46 km. Which takes off from 142.09 km. Of B. H. Road, passes through Tiptur Tank water spread and join B. H. Road at 144 km. Near bus-stand at an estimated cost of Rs. 8. 60 lakhs was agreed to by Government. T. M. C. Tiptur was requested to deposit their share of Rs. 3 00 lakhs as agreed to by it. The work has not been taken up for execution as T. M. C. Tiptur has not deposited the amount agreed to by it.

ಶ್ರೀ ವಿ. ಎಲ್. ಶಿವಪ್ಪ.—ತಿಪಟೂರು ಟೌನ್‌ನಲ್ಲಿ ಹಾದು ಹೋಗುವ ರಸ್ತೆಯನ್ನು ಟೌನಿನ ಹೊರಗಡೆ ಹಾದು ಹೋಗುವ ರಸ್ತೆಯನ್ನಾಗಿ ಮಾಡುವ ಕೆಲಸ ಬಹಳ ವರ್ಷಗಳಿಂದ ಸರ್ಕಾರ ವಿಚಾರ ಮಾಡುತ್ತಿದೆ. ಸರ್ಕಾರ ಈಗ ಅದರ ವೆಚ್ಚ ೮.೬೦ ಲಕ್ಷ ರೂಪಾಯಿಗಳೆಂದು ತಿಳಿಸಿದ್ದೀರಿ. ಅದ್ದರಿಂದ ಈಗಲಾದರೂ ಈ ಒಂದು ರಸ್ತೆಯ ಕೆಲಸವನ್ನು ಮಾಡಿಸುವ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

† ಶ್ರೀ ಎಸ್. ಬಂಗಾರಪ್ಪ.—ಇದು ೧೯೬೧ನೇ ಸಾಲಿನಿಂದಲೇ ಈ ಒಂದು ಪ್ರಪೋಸಲ್ ಇದೆ. ತಿಪಟೂರು ಪಟ್ಟಣಕ್ಕೆ ಬೈ ಪಾಸ್ ರಸ್ತೆ ಬೇಕು, ಅದನ್ನು ಆದಷ್ಟು ಶೀಘ್ರವಾಗಿ ಮಾಡಿಸಬೇಕೆಂಬ ಅಶೆಯನ್ನು ಇಟ್ಟುಕೊಂಡಿದ್ದೇವೆ. ಇದರ ಒಟ್ಟು ಖರ್ಚಿನಲ್ಲಿ ೧೯೬೩–೬೪ರ ರೇಟ್ ಪ್ರಕಾರ ತಿಪಟೂರು ಪುರಸಭೆಯವರು ೩ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಡಿಪಾಸಿಟ್ ಮಾಡಬೇಕೆಂದು ಕೇಳಿದ್ದೇವೆ. ಆದರೆ ಇದುವರೆಗೂ ತಿಪಟೂರು ಪುರಸಭೆಯವರು ಆ ಹಣವನ್ನು ಠೇವಣಿಯಾಗಿ ಇಡಲಿಲ್ಲ. ತಿಪಟೂರು ಪುರಸಭೆಯವರು ಈಗಲಾದರೂ ತಮ್ಮ ಪಾಲಿನ ಹಣವನ್ನು ಸರ್ಕಾರಕ್ಕೆ ಕೊಟ್ಟರೆ ಉಳಿದ ಹಣವನ್ನು ಸರ್ಕಾರದವರು ಒದಗಿಸಿಕೊಂಡು ಈ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ವಿ. ಎಲ್. ಶಿವಪ್ಪ .—ಲೋಕೋಪಯೋಗಿ ಇಲಾಖೆಯವರು ಮಾಡತಕ್ಕಂತಹ ರಸ್ತೆಯ ಪುರಸಭೆಯವರು ಏತಕ್ಕೆ ಹಣವನ್ನು ಕೊಡಬೇಕು ? ಇದರಲ್ಲಿ ವಿಷಯ ಏನಾಗಿದೆ ಎಂದರೆ ತುರ್ತು ಪರಿಸ್ಥಿತಿ ಇದ್ದಂತಹ ಕಾಲದಲ್ಲಿ ರಸ್ತೆಯನ್ನು ದೊಡ್ಡದನ್ನಾಗಿ ಮಾಡುವ ಸಲುವಾಗಿ ರಸ್ತೆಗೆ ಅಡ್ಡ ಬರ

ತಕ್ಕಂಥ ಕಟ್ಟಡಗಳನ್ನು ಒಡೆಯುತ್ತೇವೆಂದು ಹೇಳಿದ್ದರಿಂದ, ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ೩ ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ತಿಪಟೂರು ಪುರಸಭೆಯವರು ಒಪ್ಪಿಕೊಂಡಿದ್ದರು. ಈಗ ತುರ್ತು ಪರಿಸ್ಥಿತಿ ಹೊರಟು ಹೋಗಿದೆ. ಈ ರಸ್ತೆಯನ್ನು ಮಾಡಬೇಕಾದವರು ಲೋಕೋಪಯೋಗಿ ಇಲಾಖೆಯವರು. ಪೂರ್ಣ ಖರ್ಚನ್ನು ಅವರೇ ವಹಿಸಿಕೊಂಡು ಈ ರಸ್ತೆಯನ್ನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ಬಂಗಾರಪ್ಪ .—೨೨-೭-೧೯೭೬ರಲ್ಲಿ ಕೊನೆಯ ಪಕ್ಷ ೧.೫ ಲಕ್ಷ ರೂಪಾಯಿಗಳನ್ನಾದರೂ ಡಿಪಾಸಿಟ್ ಇಡಬೇಕೆಂದು ತಿಪಟೂರು ಪುರಸಭೆಯ ಅಧ್ಯಕ್ಷರಿಗೆ ಸರ್ಕಾರದಿಂದ ಕಾಗದವನ್ನು ಬರೆದಿದ್ದೇವೆ. ೧.೫ ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಮಾಡುತ್ತೇವೆಂದು ಅಧ್ಯಕ್ಷರು ಹೇಳಿದ್ದರು. ಅವರು ಒಪ್ಪಿಕೊಂಡಂತೆ ಕೊನೆಯ ಪಕ್ಷ ೧.೫ ಲಕ್ಷ ರೂಪಾಯಿ ಹಣವನ್ನು ಡಿಪಾಸಿಟ್ ಮಾಡಿದರೆ ಉಳಿದಿರತಕ್ಕಂಥಹ ಹಣವನ್ನು ಸರ್ಕಾರದವರು ಒದಗಿಸಿಕೊಂಡು ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ .—ತುರ್ತು ಪರಿಸ್ಥಿತಿ ಕಾಲದಲ್ಲಿ ರಸ್ತೆಗೆ ಅಡ್ಡ ಬರುವ ಕಟ್ಟಡಗಳನ್ನು ಒಡೆದುಬಿಡುತ್ತಾರೆಂದು ಅದನ್ನು ತಪ್ಪಿಸಿಕೊಳ್ಳುವ ಸಲುವಾಗಿ ೩ ಲಕ್ಷ ರೂಪಾಯಿ ಹಣವನ್ನು ಡಿಪಾಸಿಟ್ ಇಡುವುದಕ್ಕೆ ತಿಪಟೂರು ಪುರಸಭೆಯವರು ಒಪ್ಪಿಕೊಂಡಿದ್ದರೆ ಏನಃ ಆ ಹಣವನ್ನು ಕೊಡುವುದಕ್ಕೆ ಸಿದ್ಧವಾಗಿರಲಿಲ್ಲ. ಅದು ನಿರ್ಣಯವನೇನೋ ಆಯಿತು. ಅದನ್ನು ರೆಕಾರ್ಡ್ ಮಾಡುವ ಸನ್ನಿವೇಶದಲ್ಲಿ ಅದನ್ನು ನಿಂತು ಹೋಯಿತು. ಈಗ ಸರ್ಕಾರ ತಿಪಟೂರು ಪುರಸಭೆಯಿಂದ ಏನು ೧.೫ ಲಕ್ಷ ರೂಪಾಯಿಗಳನ್ನು ನಿರೀಕ್ಷಣೆ ಮಾಡಿದ್ದಾರೋ ಅದು ಬರುವಂತಿಲ್ಲ. ಅದನ್ನು ನಂಬಿದ್ದರೆ ಈ ರಸ್ತೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರಸ್ತೆಯಲ್ಲಿ ಪ್ರತಿಯೊಬ್ಬ ಸಚಿವರು ಓಡಾಡಿದ್ದಾರೆ. ಅದರ ಪೂರ್ಣ ಖರ್ಚನ್ನು ಸರ್ಕಾರದವರೇ ವಹಿಸಿಕೊಂಡು ಈ ಬೈ ಪಾಸ್ ರಸ್ತೆಯನ್ನು ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ .—ತಿಪಟೂರು ಟೌನಿನ ಬೈ ಪಾಸ್ ರಸ್ತೆ ಬೇಕೆನ್ನುವುದರಲ್ಲಿ ಬಿನಾಮಿ ಭಿಪ್ರಾಯವಿಲ್ಲ.. ನಾನೂ ಕೂಡ ಆ ರಸ್ತೆಯಲ್ಲಿ ಓಡಾಡಿದ್ದೇನೆ. ಏಕೆಂದರೆ ನಾನು ಊರಿಗೆ ಹೋಗಿ ಬರತಕ್ಕಂಥ ದಾರಿ ಅದು. ಅದು ಆಗಬೇಕೆನ್ನುವ ಮಾತನ್ನು ಒಪ್ಪುತ್ತೇನೆ, ಆದರೆ ಮಾನ್ಯ ಸದಸ್ಯರು ಈಗ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ತುರ್ತು ಪರಿಸ್ಥಿತಿ ಕಾಲದಲ್ಲಿ ರಸ್ತೆಗೆ ಅಡ್ಡ ಬರತಕ್ಕಂಥ ಕಟ್ಟಡಗಳನ್ನು ಒಡೆದುಹಾಕುವುದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ೩ ಲಕ್ಷ ರೂಪಾಯಿಗಳನ್ನು ತಿಪಟೂರು ಪುರಸಭೆಯವರು ಡಿಪಾಸಿಟ್ ಇಡುವುದಕ್ಕೆ ಒಪ್ಪಿದರೆ ಮಾತ್ರ, ರಸ್ತೆಯನ್ನು ಮಾಡುವುದಕ್ಕಾಗಲ್ಲ ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಅದರ ಪೂರ್ಣ ಖರ್ಚನ್ನು ಸರ್ಕಾರವೇ ವಹಿಸಿಕೊಂಡು ಈ ರಸ್ತೆಯ ಕಾರ್ಯವನ್ನು ಮಾಡಬೇಕೆಂದು ಹೇಳಿದ್ದಾರೆ. ಇದನ್ನೆಲ್ಲಾ ನಾನು ವಿಚಾರ ಮಾಡಿ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ .—ನಿಮ್ಮ ಕ್ರಮದಲ್ಲಿ ರಸ್ತೆಯ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ .—ರಸ್ತೆಯ ಕೆಲಸವನ್ನು ತೆಗೆದುಕೊಳ್ಳುವುದೂ ಕೂಡ ಕ್ರಮದಲ್ಲಿ ಸೇರಿಕೊಂಡಿದೆ.

ಶ್ರೀ ಎ. ಲಕ್ಷ್ಮಿಸಾಗರ್ .—ಬೈ ಪಾಸ್ ರಸ್ತೆಯನ್ನು ಮಾಡತಕ್ಕಂಥಹ ವಿಚಾರದಲ್ಲಿ ಮಾನ್ಯ ಶಿವಪ್ಪನವರು ಹೇಳಿದ ಹಾಗೆ ಹಿಂದೆ ತುರ್ತು ಪರಿಸ್ಥಿತಿ ಇದ್ದಂತಹ ಕಾಲದಲ್ಲಿ ಮನೆಗಳನ್ನು ಎಲ್ಲಿ ಕೆಡವಿ ಬಿಡುತ್ತಾರೋ ಎಂಬ ಭಯದಿಂದ ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ೩ ಲಕ್ಷ ರೂಪಾಯಿ ಹಣವನ್ನು ಡಿಪಾಸಿಟ್ ಇಡುವುದಕ್ಕೆ ತಿಪಟೂರು ಪುರಸಭೆಯವರು ಒಪ್ಪಿಕೊಂಡಿದ್ದರು. ಆದರೆ ಈಗ ತುರ್ತು ಪರಿಸ್ಥಿತಿಯ ಭಯ ಹೋಗಿ ಬಿಟ್ಟಿದೆ. ರಸ್ತೆಯನ್ನು ಮಾಡತಕ್ಕಂಥ ಲೋಕೋಪಯೋಗಿ ಇಲಾಖೆಗೆ ಸೇರಿದ್ದು, ಇದರಲ್ಲಿ ಮಂತ್ರಿವಾದುದು ಏನೆಂದರೆ ಈ ರಸ್ತೆ ಊರಿನ ಮಧ್ಯದಲ್ಲಿದೆ. ಇದರಿಂದ ಜನರಿಗೂ ತೊಂದರೆ, ಮತ್ತೆ ಪ್ರಯಾಣಿಕರಿಗೂ ತೊಂದರೆ. ಈ ರಸ್ತೆ ನ್ಯಾಯವಾಗಿ ಆಗಬೇಕಾಗಿದೆ, ಇದರ ಬಗ್ಗೆ ಸರ್ಕಾರದ ತೀರ್ಮಾನವೇನು ?

ಶ್ರೀ ಎಸ್. ಬಂಗಾರಪ್ಪ .—ಬೈ ಪಾಸ್ ರಸ್ತೆಯ ವಿಷಯದಲ್ಲಿ ಒಂದು ಪಾಲಿಸಿ ಮ್ಯಾಟರ್ ಎಂಬುದಾಗಿ ಪರಿಗಣಿಸುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ತಿಪಟೂರು ಆಗಿರಬಹುದು, ಮತ್ತೊಂದು ಇರಬಹುದು, ರಾಜ್ಯದಲ್ಲಿ ಈ ರೀತಿಯಾಗಿ ಪ್ರಯಾಣಕ್ಕೆ ತೊಂದರೆ ಇದೆ. ವಾಹನಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ಆದರೆ ರಸ್ತೆ ಮಾತ್ರ ಮೊದಲು ಇದ್ದಂತಹ ರೀತಿಯಲ್ಲೇ ಇವೆ, ಅವುಗಳನ್ನು ದೊಡ್ಡದನ್ನಾಗಿ ಮಾಡುವುದಕ್ಕಾಗಿಲ್ಲ. ಇದಕ್ಕೆ ಕೆಲವು ಕಟ್ಟಡಗಳು ಮಧ್ಯ ಬಂದು ಅದರ ತಕರಾರು ಬರುತ್ತದೆ, ಕೆಲವು ವಿಚಾರದಲ್ಲಿ ಹಣಕಾಸಿನ ಸಕಾರಣಗಳೂ ಬರುತ್ತವೆ. ಇದರ ಬಗ್ಗೆ ನಾವು ಅಧಿಕಾರಿಗಳ ಜೊತೆಯಲ್ಲಿ ಚರ್ಚೆಯನ್ನಿಟ್ಟು ಕೊಂಡಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ, ಪಟ್ಟಣಗಳಲ್ಲಿ ಅಂದರೆ ದೊಡ್ಡ ದೊಡ್ಡ ನಗರಗಳಲ್ಲಿ, ಮಂಗಳೂರು, ಬೆಳಗಾಂ, ಹುಬ್ಬಳ್ಳಿ ಧಾರವಾಡ ಈ ಊರುಗಳಲ್ಲಿ ಬೈ ಪಾಸ್ ರಸ್ತೆಯನ್ನು ಮಾಡಬೇಕು ಈಗ ಈ ಪಟ್ಟಣಗಳು ವಿಸ್ತರಗೊಳ್ಳುವುದಕ್ಕೆ ಮೊದಲೆ ರಸ್ತೆಯ ಜಾಗವನ್ನು ಅಕ್ವೈರ್ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇದರ ಸಂಪೂರ್ಣ ವಿವರ ನಮ್ಮ ಇಲಾಖೆಯ ಡಿಮ್ಯಾಂಡ್ ಬರುವ ಸಮಯಕ್ಕೆ ರೆಡಿಯಾಗಬಹುದು. ಇದರ ಮಧ್ಯ ಮಾನ್ಯ ಸದಸ್ಯರು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ ಇದರ ಪೂರ್ಣ ಖರ್ಚನ್ನು ಸರ್ಕಾರದವರೇ ವಹಿಸಿಕೊಂಡು ಈ ಬೈ ಪಾಸ್ ರಸ್ತೆಯನ್ನು ಮಾಡಬೇಕು, ಪುರಸಭೆಯವರು ತಮ್ಮ ವಂತಿಕೆಯನ್ನು ಕೊಡುವುದಕ್ಕಾಗುವದಿಲ್ಲ. ಈ ವಿಷಯ ಕೂಡ ಪರಿಶೀಲನೆ ಮಾಡ ವುದಕ್ಕೆ ಯೋಗ್ಯವಾದುದು, ಇದನ್ನು ಪರಿಶೀಲನೆ ಮಾಡುತ್ತೇನೆ.

Non-use of Television in Villages

786 SRI M. Y. PATIL (Afzalpur) :— Will the Minister for Rural Development and P. Raj be pleased to state :—

(*a*) the reasons why Television is not being used in most of the villages, where it has been installed in Gulbarga District ;

(*b*) which Department bears the maintenance charges of such Television ;

(*c*) which Department bears the electricity charges ?

SRI K. PRABHAKAR :—Minister for Rural Development and P. Rai

(*a*) Generally the T. V. Set are being used in almost all the Villages where they have been installed. Some times it is not being operated due to failure in power supply and in a few cases of single teacher schools when that teacher is absent himself from headquarters on leave or on other duty.

(*b*) For the present the T V. Sets are being maintained by a Doordarshan Kendra, Gulbarga (Central Government).

(c) State Government bears the Electricity consuption charges. Funds are placed at the disposal of Deputy Director of Public instruction, Gulbarga.

ಶ್ರೀ ಎಂ. ವೈ. ಪಾಟೀಲ್ :— ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ದೂರದರ್ಶನ ಸೆಟ್ಟುಗಳನ್ನು ಅಳವಡಿಸಲಾಗಿರುವ ಬಹುತೇಕ ಎಲ್ಲ ಗ್ರಾಮಗಳಲ್ಲಿ ಅವುಗಳನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿದೆ ಎಂಬುದಾಗಿ ಹೇಳಿದ್ದಾರೆ, ಆದರೆ ನನ್ನ ಗಮನಕ್ಕೆ ಬಂದ ಪ್ರಕಾರ ೧೯೮೬ಕ್ಕೆ ೯೦ ಹಳ್ಳಿಗಳಲ್ಲಿ ಈ ದೂರದರ್ಶನ ಸೆಟ್ಟುಗಳನ್ನು ಅಳವಡಿಸಿಲ್ಲ. ಕೆಲವು ಗ್ರಾಮಗಳಲ್ಲಿ ಅಳವಡಿಸಿರುವ ದೂರದರ್ಶನ ಸೆಟ್ಟುಗಳು ಕೆಟ್ಟುಹೋಗಿ ಅವುಗಳನ್ನು ರಿಪೇರಿ ಮಾಡಿಲ್ಲ. ರಿಪೇರಿ ಮಾಡುವ ಕೆಲಸ ರಾಜ್ಯ ಸರ್ಕಾರದ್ದು ಕೇಂದ್ರ ಸರ್ಕಾರದ್ದಲ್ಲ ಎಂಬುದಾಗಿ ಅಧಿಕಾರಿಗಳು ಹೇಳುತ್ತಾರೆ. ಮತ್ತೆ ಎಲೆಕ್ಟ್ರಿಸಿಟಿ ಚಾರ್ಜಸ್ಸನ್ನು